> (Extract from Basu's commentary on the "Constitution of India" (P.544).

ನಮಗೆ freedom of speesh, freedom of expression ಇದೆ ಎಂದು ಹೇಳಿಬಿಟ್ಟು ಒಂದು ನಾಟಕದ ಥಿಯೇಟರಿನಲ್ಲಿ ಮನಸ್ಸು ಬಂದಹಾಗೆ ಮಾತನಾಡಬೇಕು ಎನ್ನುವುದನ್ನು ನಾನು ಒಪ್ಪುವುದಿಲ್ಲ. ಯಾವ ನಾಟಕದಲ್ಲಿ ಸಮಾಜದಲ್ಲಿರತಕ್ಕ ದುರ್ದೋಷಗಳನ್ನು ಎತ್ತಿ ಹಿಡಿದು ಸಮಾಜದಲ್ಲಿರ ಕ್ಕ ಕೆಟ್ಟದ್ದನ್ನು ಎತ್ತಿ ಹಿಡಿದು ಒಳ್ಳೆಯದನ್ನು ಅನುಸರಿಸುವಂತೆ ತೋರಿಸುವ ನಾಟಕಗಳನ್ನು ನೋಡುವುದಕ್ಕಾಗುತ್ತದೆ. ಈ ಸಭೆಯಲ್ಲಿ ಕೆಲವು ನಾಟಕಗಳ ವಿಚಾರ ಹೇಳಿದ್ದೇವೆ. ಅಂಥ ನಾಟಕಗಳಿಂದ ಕಲಿಯಬೇಕಾದ್ದು ಏನೂ ಇರುವುದಿಲ್ಲ. ಬರೀ ತಮಾಷೆ ನೋಡಿಕೊಂಡು ಎರಡು ಗಂಟೆ ಕುಳಿತಿರುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಇದನ್ನು ಕೂಡ ಸ್ವಲ್ಪ ಯೋಚನೆ ಮಾಡಬೇಕಾದ್ದು ಸರಿ ಎಂದು ಕಾಣುತ್ತದೆ.

ನಾನು ಮಾನ್ಯ ಮಂತ್ರಿಗಳಿಗೆ ಕೇಳುವುದು ನಾಟಕಗಳಲ್ಲಿ ಯಾವುದನ್ನು ನೋಡಬಹುದು ಯಾವುದನ್ನು ನೋಡಬಾರದು ; ಯಾವುವು ಮನುಷ್ಯನನ್ನು ಪ್ರಚೋದನೆ ಮಾಡುತ್ತದೆ, ಅವನಲ್ಲಿರುವ ಸುಪ್ತಪ್ರಜ್ಞಾವಾದ ಭಾವನೆಗಳನ್ನು ಉದ್ವೇಗಗೊಳಿಸುತ್ತದೆ, ಅದನ್ನೆಲ್ಲ ಆ ನಾಟಕದ ಪುಸ್ತಕವನ್ನು ಓದಿದ ಮೇಲೆ ಇಂಥ ನಾಟಕವನ್ನು ಆಡಬಾರದು ಎಂದು ಅದನ್ನು ನಿಷೇಧಿಸಿ. ಬಹಳ ಹಿಂದಿನಿಂದಲೂ ನದಾರಮೆ ನಾಟಕವನ್ನು ಆಡುತ್ತಾರೆ. ಅವನ್ನು ನೆಡಿದರೆ ನಾಳೆ ಬೆಳಗ್ಗೆ ಒಂದು ಕೋಮಿನ ಜನ ನಮಗೆ ಅಪಮಾನ ಮಾಡಬೇಕೆಂದು ಸದಾರಮೆ ನಾಟಕವನ್ನು ಆಡುತ್ತಾರೆ ಅದನ್ನು ನಿಷೇಧ ಮಾಡಿ ಎಂದು ಹೇಳುತ್ತಾರೆ ಏನು ಮಾಡುತ್ತೀರಿ ? ಡೆಪ್ಯುಟಿ ಕಮಿಷನರವರಿಗೆ ಒನ್ನಡ ಬರುವುದಿಲ್ಲ, ಇಂಗ್ಲಿಷ್ ತಿಳಿಯುವುದಿಲ್ಲ, ಉರ್ದು ಅರ್ಥವಾಗುವುದಿಲ್ಲ. ಪೋಲೀಸಿನವರಿಗೂ ನಾಟಕ ಕಂಪನಿಯವರಿಗೂ ಸರಿ ಇರುವುದಿಲ್ಲ. ಅವರು ಒಂದು ರಿಪೋರ್ಟನ್ನು ಕೊಡುತ್ತಾರೆ. ಈ ಊರಿನಲ್ಲಿ ಇಂಥ ನಾಟಕ ಆಡುತ್ತಾರೆ, ಊರಿನಲ್ಲಿ ಗುಲ್ಲು ಎದ್ದಿದೆ, ವೈಶ್ಯರು ದಂಗೆ ಎದ್ದಿದ್ದಾರೆ ಆದ್ದರಿಂದ ನಾಟಕ ಆಡಬಾರದು ಎಂದು ಹೇಳುತ್ತಾರೆ. ಆ ನಾಟಕವನ್ನು ಆಡಬೇಕೇ, ಬಿಡಬೇಕೇ ? ಇದನ್ನು ಹೇಗೆ ವಿರ್ಮಶೆ ಮಾಡುವುದು ? ಆದುದರಿಂದ ಅಂಥ ನಾಟಕಗಳನ್ನು ಆಡುವುದು ಸರಿಯೇ ತಪ್ಪೇ ಎಂದು ಕೂಲಂಕಷವಾಗಿ ನೋಡಲು ಅದನ್ನು ಸೆನ್ಸಾರ್ ಮಾಡತಕ್ಕ ಒಂದು ಬೋರ್ಡ್ ಮಾಡಿ ಇಂಥಿಂಥ ನಾಟಕಗಳನ್ನು ಆಡಬಹುದು ಎಂದು ಒಂದು ದೊಡ್ಡ ಪಟ್ಟಿಯನ್ನು ಹೊರದಿಸಿಬಿಟ್ಟರೆ ಆವಾಗ ಇಂಥ ನಾಟಕ ಆಡುವುದು ತಪ್ಪು ಎಂದು ಹೇಳಬಹುದು. ನಾನು ಚಿಕ್ಕ ಹುಡುಗನಾಗಿದ್ದಾಗಿನಿಂದಲೂ ಇವತ್ತಿಗೂ ನೋಡುತ್ತಿದ್ದೇನೆ,

ನದಾರಮೆ ನಾಟಕವನ್ನು ಆಡುತ್ತಿದ್ದಾರೆ. ಇವತ್ತು ಅದು ಹೇಗೆ objectionable ಆಗುತ್ತದೆ, ಒಂದು ಕೋಮಿನ ಮೇಲೆ ಯಾವ ದುಷ್ಪರಿಣಾಮವಾಗುತ್ತದೆ?

ಶ್ರೀ ಟಿ. ಜಿ. ಸತ್ಯನಾರಾಯಣ (ಬಳ್ಳಾರಿ).—ಕೆಲವು ಊರುಗಳಲ್ಲಿ ನದಾರಮೆ ನಾಟಕವನ್ನು ಬಂದ್ ಮಾಡಿದ್ದಾರೆ. ಬೆಂಗಳೂರಿನಲ್ಲಿಯೂ ಮಾಡಿದ್ದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಅದನ್ನೇ ಸ್ವಾಮಿ ಹೇಳುತ್ತಿರುವುದು. ಆ ನಾಟಕವನ್ನು ನೋಡೆಬೇಕೇ, ಬಿಡಬೇಕೇ. ಹಾಗೆಯೇ ಕೃಷ್ಣಾರ್ಜುನ ಯುದ್ಧ, ದುಶ್ಯಾಸನ ಕಾಳಗ, ಸುಭದ್ರಾ ಪರಿಣಯ ಇಂಥವುಗಳನ್ನು ನೋಡಬೇಕೇ ಅಥವಾ ಬಿಡಬೇಕೇ? ಸುಭದ್ರ ಪರಿಣಯ ನಾಟಕವನ್ನು ತೆಗೆದುಕೊಂಡರೆ ಅದರಲ್ಲಿ ಅರ್ಜುನ ಕಪಟ ಸನ್ಯಾಸಿಯಾಗಿ ಸುಭದ್ರೆಯನ್ನು ತೆಗೆದುಕೊಂಡು ಹೊರಟು ಹೋಗುತ್ತಾನೆ. ಆ ನಾಟಕವನ್ನು ಈ ಸಮಾಜದಲ್ಲಿ ಆಡಿದರೆ ನಮ್ಮ ಹೆಣ್ಣು ಮಕ್ಕಳನ್ನು ಇನ್ನೊಬ್ಬನು ಕಳವು ಮಾಡುವುದಕ್ಕೋಸ್ಕರ ಅರ್ಜುನನನ್ಯಾಸಿಯಾಗಿ ಪಾಠ ಪ್ರವಚನ ಹೇಳುತ್ತೇನೆ ಎಂದು ಹೊತೆಯುಕೊಂಡು ಹೋದರೆ ಏನು ಗತಿ? ಇದನ್ನು ಆಡಬೇಕೇ, ಬಿಡಬೇಕೇ! ಅದನ್ನು ದಯಪಟ್ಟು ಹೇಳಿ. ಮಹಾಭಾರತದಲ್ಲಿ ಇರುವ ಕೆಲವು ಅಂಶಗಳನ್ನು ಆಡಬೇಕೇ ರಾಮಯಣದಲ್ಲಿ ರುವುದನ್ನು ಆಡಬೇಕೇ, ಸಾಮಾಜಿಕ ನಾಟಕಗಳನ್ನು ಆಡಬೇಕೇ, ಪೌರಾಣಿಕ ನಾಟಕಗಳನ್ನು ಆಡಬೇಕೇ, ಯಾವುದನ್ನು ಆಡಬಹುದು ಎಂದು ಹೇಳಿಬೇಕು. ಇದಕ್ಕೆ ಪರಿಣತರ ಒಂದು ಕಮಿಟಿ ಯನ್ನು ನೇಮಕ ಮಾಡಿ ಅವರು ಸೆನ್ಸಾರ್ ಮಾಡಿದ್ದನ್ನು ಗೆಜೆಟ್ಟಿನಲ್ಲಿ ಪಬ್ಲಿಷ್ ಮಾಡುತ್ತೀರಾ? ನಮ್ಮ ಜಿಲ್ಲೆಯಲ್ಲಿರುವ ಡೆಪ್ಯುಟಿ ಕಮಿಷನರಿಗೆ ಸಿನೆಮಾ ಎಂಥಾದ್ದು, ನಾಟಕ ಎಂಥಾದ್ದು, ರಾಮಾಯಣ ಎಂದರೆ ಏನು, ಮಹಾಭಾರತ ಎಂದರೆ ಏನು ಎಂದು ಗೊತ್ತಿಲ್ಲ. ಕಿತ್ತೂರು ಚನ್ನಮ್ಮ ಕನ್ನಡ ನಾಡಿನ ವೀರ ರಾಣಿ ಎಂದರೆ ಅವರು ಎಲ್ಲಿದ್ದರು ಎಂದು ಕೇಳುತ್ತಾರೆ. ಅವರಿಗೆ ಏನು ವಾಡುವುದಕ್ಕಾಗುತ್ತದೆ. ಕಿತ್ತೂರು ಚನ್ನಮ್ಮ ನಾಟಕವಾಡಬೇಕಾದರೆ, ಅದರಲ್ಲಿ ಕಿತ್ತೂರು ಚನ್ನಮ್ಮ ನಿಗೂ ಮುನಲ್ಮಾನ್ ದೊರೆಗಳಿಗೂ ಯುದ್ಧವಾಗುತ್ತದೆ. ಯುದ್ಧವಾದಾಗ ಹಿಂದು ಮುನಲ್ಮಾನ್ ಗಲಾಟೆಗೆ ಅವಕಾಶವಾಗುತ್ತದೆ, ಅದನ್ನು ಆಡಬಾರದು ಎಂದು ನಿಷೇಧ ಮಾಡುತ್ತಾರೆ. ಆಗ ಏನು ಮಾಡುತ್ತೀರಿ? ಇದನ್ನು ಸ್ವಲ್ಪ ಯೋಚನೆ ಮಾಡಬೇಕು.

ಒಂದು ನಾಟಕ ಆಡಬಾರದು ಎಂದು ಟೆಂಪೊರರಿಯಾಗಿ ಪ್ರಾಹಿಬಿಟ್ ಮಾಡುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಸ್ವಲ್ಪ ವಿವೇಚನೆ ಇರಬೇಕಲ್ಲ ಸ್ವಾಮಿ! ಈ ದೇಶದ ಸಂಸ್ಕೃತಿ, ಈ ದೇಶದಲ್ಲಿ ಹಿಂದೆ ಆಳಿದಂಥ ರಾಜಮಹಾರಾಜರುಗಳು, ಈ ಭೂಮಿಯಲ್ಲಿ ಹುಟ್ಟಿದ ಥ ಮಹಾಪುರುಷರು ಇಂಥವರ ಜೀವನ ಚರಿತ್ರೆಯಲ್ಲಿ ಅವರಿಗೆ ಗೊತ್ತಿರುತ್ತದೆಯೇ, ಜನತೆಯ ಮೇಲೆ ಏನು ಪರಿಣಾಮ ಬೀರುತ್ತದೆ ಎಂದು ಗೊತ್ತಿರುತ್ತದೆಯೇ! ಶ್ರೀವಾನ್ ಮಾಸ್ತಿ ವೆಂಕಟೇಶ ಐಯ್ಯಂಗಾರ್ ಅಂಥವರು, ಅಥವಾ ಶಿವಮೂರ್ತಿ ಶಾಸ್ತ್ರಿಗಳಂಥವರು, ಶ್ರೀರಂಗ, ದ. ರಾ. ಬೇಂದ್ರೆ, ಶಿವರಾಮ ಕಾರಂತ ಇಂಥವರನ್ನು ನೇಮಕ ಮಾಡಿದರೆ ನಾವು ಒಪ್ಪಿಕೊಳ್ಳಬಹುದು. ಇಲ್ಲದೆ ಹೋದರೆ ಈ ಡೆಫೆನಿಷನ್ ಕ್ಲಾಜಿನಲ್ಲಿ ಏನು ಹೇಳಿದ್ದೀರಿ indecent, scurrilous, obscene ಎಂದು. ಇದನ್ನು ಯಾರು ಹೇಳುವವರು?

ಮಹಾತ್ಮ ಗಾಂಧಿಯವರು ಭಗವದ್ಗೀತೆ ಜನಸಾಮಾನ್ಯರಿಗೂ ಹೊಂದಿಕೊಳ್ಳುವ ರೀತಿಯಲ್ಲಿ ವಿವರಿಸಿದ್ದಾರೆ. ಅದರಲ್ಲಿ ಕೃಷ್ಣಾರ್ಜುನರ ಸಂವಾದವಿದೆ. ಹೊಡೆಯುವವನು ಯಾರು, ಹೊಡೆಸಿ ಕೊಳ್ಳುವವನು ಯಾರು ಎಂದು ಹೇಳುತ್ತಾನೆ. ಯಾರಾದರೂ ಡೆಪ್ಯುಟಿ ಕಮಿಷನರ ಒಂದು ಪ್ರಾಹಿಬಿಟರಿ ಆರ್ಡರ್ ಹಾಕಿದರೆ ಏನು ಮಾಡುತ್ತೀರಿ? ಯಾರಾದರೂ ಒಬ್ಬರು ಕಾಂಗೊ ಅಥವಾ ಕಟಾಂಗದಿಂದ ಬಂದವರು ಈ ರಾಜ್ಯದ ನ್ಯಾಯಾಧೀಶರಾದರೆ ಅವರು ಹೇಗೆ ತೀರ್ಮಾನ ಮಾಡುತ್ತಾರೆ ಎಂದು ಕೇಳುತ್ತೇನೆ. ಯಾವ ನಾಟಕವನ್ನು ಆಡಬಹುದು, ಯಾವ ನಾಟಕವನ್ನು ಆಡಬಾರದು ಎಂಬುದಕ್ಕೆ ನಾಟಕ ಬರೆದವರು ಬೋರ್ಡಿಗೆ ಪುಸ್ತಕವನ್ನು ಕಳಿಸಬೇಕು, ಅವರು ಅದನ್ನು ನೋಡಿ ಇದರಲ್ಲಿ ದೋಷವಿಲ್ಲ, ಸಮಾಜದ ಮೇಲೆ ಅಥವಾ ಸರ್ಕಾರದ ಮೇಲೆ ಯಾವರೀತಿ ಯಲ್ಲಿಯೂ ದುಷ್ಪರಿಣಾಮವಾಗುವುದಿಲ್ಲ ಎಂದು ಸರ್ಟಿಫಿಕೇಟನ್ನು ಕೊಟ್ಟರೆ ಅದನ್ನು ಎಲ್ಲ ಬೇಕಾದರೂ ಆಡಿಕೊಳ್ಳಲು ಬಿಟ್ಟು ಬಿಡಿ. ಪ್ರತಿ ನಿಮಿಷಕ್ಕೂ ಒಂದು ನಾಟಕವನ್ನು ಆಡಬೇಕಾದರೆ ಡೆಪ್ಯುಟಿ ಕಮಿಷನರ ಹತ್ತಿರ ಒಂದು ಕಾಪಿಯನ್ನು ಕೊಟ್ಟು ಇದು ದೋಷಾರ್ಹವಲ್ಲ ಎಂದು ಕಂಡು ಬಂದಮೇಲೆ ನಾಟಕವನ್ನು ಆಡಲು ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದರೆ ಅದಕ್ಕೆ ಒಂದು ತಿಂಗಳು ಬೇಕಾಗುತ್ತದೆ. ಪಾರ್ಟಿ ವೈಷಮ್ಯಗಳಿರುವ ಊರಿನಲ್ಲಿ ನಾಟಕವನ್ನು ಆಡುವುದಕ್ಕೆ ಆಗುವುದಿಲ್ಲ. ಒಂದಾನೊಂದು ಕಾಲದಲ್ಲಿ ಈ ರಾಜ್ಯದಲ್ಲಿ ಸಂಸ್ಕೃತಿ ಬೆಳೆಯಬೇಕು, ಸಂಸ್ಕೃತಿ ಪ್ರಸಾರ ಮಾಡಬೇಕು, ವೇದಗಳು, ಉಪನಿಷತ್ತುಗಳು ಇವನ್ನೆಲ್ಲ ಓದಬೇಕು ಎಂದು ಇದೇ ಸರ್ಕಾರ ನಿಬಂಧನೆ ಮಾಡಿತು. ಯಾವ ಸರ್ಕಾರ ಇದನ್ನು ಬೆಳೆಸಬೇಕು ಎಂದು ಹೊರಟಿತ್ತೋ ಆ ಸರ್ಕಾರ ಈ ಕಾನೂನಿನಲ್ಲಿ ಸ್ವಲ ಸರಳವಾದ ರೀತಿಯಲ್ಲಿ ಜನತೆಯ ಹಿತಕ್ಕಾಗಿ ನಿಬಂಧನೆಗಳನ್ನು ಅಳವಡಿಸದೆ ಕುತಾರಪ್ರಯ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಪಾಗಿರುವಂಥ ನಿಂಬಧನೆಗಳನ್ನು ಹಾಕಿದ್ದಾರೆ. ಹೀಗೆ ಅಡ್ಡಿ, ಆತಂಕಗಳನ್ನು ತಂದೊಡ್ಡಿದರೆ ಇದರಿಂದ ನೀರಿಕ್ಷಣೆ ಮಾಡಿದಷ್ಟು ಫಲ ದೊರೆಯುವುದಿಲ್ಲ.

ಶ್ರೀ ಆರ್. ಎಂ. ಪಾಟೀರ್.—ಯಾವುದಕ್ಕೆ ಯಾರೂ ಕುಠಾರ ಹಾಕಿಲ್ಲ.

Please see Explanation II.

"In judging whether any performance is an objectionable performance, the play, pantomime or other drama shall be considered as a whole."

It is not piecemeal; it should be considered as a whole and while considering the entire literature, is objectionable, then it will be prohibited. Otherwise, the entire drama can be played.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಈ ವಿಷಯದ ಮೇಲೆ ಮಾತನಾಡುವಾಗ ತಾವು ಇರಲಿಲ್ಲ. Decent ಎಂದರೆ ಏನು, indecent ಎಂದರೆ ಏನು ಎಂದು ಸರಿಯಾಗಿ ಗೊತ್ತಾಗುವಂತೆ ಅರ್ಥ ವಿವರಣೆಯನ್ನು ಕೊಡಬೇಕು. ಒಂದು indecent ಪುಸ್ತಕವನ್ನು ನಮ್ಮ ಮಕ್ಕಳ ಕೈಯಲ್ಲಿ ಕೊಟ್ಟು, ಅದನ್ನು ಓದಿಸುತ್ತಿದ್ದೀರಲ್ಲ. ಅದನ್ನು ನೋಡಿ ಸರಿ, ತಪ್ಪು ಎಂದು ಹೇಳುವವರೇ ಇಲ್ಲ. "ಕಾಂತಾಪುರ" ಒಂದು ಪುಸ್ತಕವನ್ನು ನಮ್ಮ ಮಕ್ಕಳ ಕೈಯಲ್ಲಿ ಕೊಟ್ಟು ಓದಿಸುತ್ತಿದ್ದೀರಿ. (E) It leads to prostitution. It makes a boy to run after a girl. Such a book is prescribed for teen-aged boys and girls in the Colleges.

ಎಂಥ ನಾಟಕ ಆಡಬೇಕು ಎಂಬುದಕ್ಕೆ ಒಂದು ಕಮಿಟಿ ಮಾಡಿಲ್ಲ. ಆದ್ದರಿಂದ ಇದನ್ನು ಅರಿಕೆ ಮಾಡಿಕೊಳ್ಳುತ್ತೇನೆ. ಆದರೆ ನಾಟಕ ವಿಚಾರದಲ್ಲಿ ಕಾನೂನು ಇರಬೇಕು ಎಂದು ಹೇಳತಕ್ಕಂಥವನು ನಾನು. ಒಳ್ಳೆಯದು ಆಗಬೇಕೆಂದು ಜನ ನಾಟಕ ನೋಡಲು ಹೋಗುತ್ತಾರೆ. ಒಳ್ಳೆಯದನ್ನು ಕಲಿಯುವುದಕ್ಕೆ ಹರಿಕಥೆಗೆ ಜನ ಹೋಗುತ್ತಾರೆ. ನಾಟಕದಲ್ಲಿ ಇದು ಸರಿಯಲ್ಲ ಎಂದು ಹೇಳುವುದು ಹೇಗೆ? ಸದಾರಮೆ ನಾಟಕದಲ್ಲಿ ಯಾವ ಭಾಗ ತೆಗೆದು ಹಾಕಲು ಹೇಳುತ್ತೀರಿ? ವೀರಣ್ಣನವರ ಸದಾರಮೆ ನಾಟಕ ಬಹಳ ಪ್ರಸಿದ್ಧಿ ಪಡೆಯಿತು. ಇಂಥ ನಾಟಕ ಪ್ರೊಹಿಬಿಟ್ ಮಾಡುವುದಕ್ಕೆ ಹೋಗುತ್ತೀರಾ ಸ್ವಾಮಿ! ನಮ್ಮ ಜಿಲ್ಲೆಯ ಡೆಪ್ಯುಟಿ ಕಮಿಷನರ್ ಅವರಿಗೆ ಸದಾರಮೆ ನಾಟಕ ಅಂದರೆ ಏನು ಗೊತ್ತಿಲ್ಲ. ಗುಲೇಬಕಾವಲಿ ನಾಟಕ ಯಾವುದು ಗೊತ್ತಿಲ್ಲ. ಸತ್ಯ ಹರಿಶ್ಚಂದ್ರ ಯಾವುದು ಗೊತ್ತಿಲ್ಲ.

[Mr. Speaker in the Chair.]

Sri R. M. PATIL.—A legislation cannot be passed for one Deputy Commissioner of your district.

3-30 P.M.

Sri C. J. MUCKANNAPPA.—Sir, I want to know, how many Deputy Commissioners out of the 19 know about these dramas? In a factuous village, it creates a good lot of trouble.

ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದರಿಂದ ಹಳ್ಳಿಗಳಲ್ಲಿ ಬಹಳ ದುಷ್ಪರಿಣಾಮ ಉಂಟಾಗುತ್ತದೆ. ಯಾವ ನಾಟಕ ಆಡಬೇಕು ಯಾವ ನಾಟಕ ಆಡಬಾರದು ಎನ್ನುವುದನ್ನು ಗೊತ್ತುಮಾಡುವುದಕ್ಕೆ ಒಂದು ಸೆನ್ಸಾರ್ ಬೋರ್ಡ್ ರಚನೆ ಮಾಡಬೇಕೆಂದು ಸೂಚಿಸುತ್ತೇನೆ.

Mr. SPEAKER.—So, a drama should not be enacted until the Censor Board has certified it. We do not have the same control as we have in a film. In a drama, actors are likely to be changed.

Sri C. J. MUCKANNAPPA.—Sir, what are the fundamental rights guaranteed under the Constitution ? It is freedom of speech, freedom of expression and enacting drama is also a fundamental right.

Mr. SPEAKER.—It should be consistent with other things!

Sri C. J. MUCKANNAPPA.—There, I do not agree with the Government because they have not specifically said what is decency and what is indecency, what drama should be enacted and what drama shouldnot be enacted. What are the indecent things in the dramas written by persons like Sivarama Karanth and others ?

† Sri R. M. PATIL.—Sir, one should understand clause 6 which is sufficiently wide enough. The main principle is that which is grossly indecent, scurrilous or obscene or intended to black mail, that will be prohibited. If the highest authority in the district does not understand these things, it is really pitiable to know who else will. If an offence is committed, the ingredients are there under penal sections. So far as powers of the District Magistrate or the Magistrate who is to try these cases are concerned, he can very well understand the significance of these words and come to the conclusion, whether it is grossly indecent or scurrilous or obscene. This is nothing new in this Bill. This is an expression which is said as objectionaal in a particular circumstance and these particular circumstances are explained in Explanation I and Explanation II.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.--ಸ್ವಾಮಿ, ನಾನು ಇದನ್ನು ಏತಕ್ಕೆ ಹೇಳುತ್ತೇನೆ ಅಂದರೆ ಪೋಲೀಸಿನವರಿಗೆ ಈ ಅಧಿಕಾರ ಕೊಡುತ್ತಾರೆ. ಲಾ ಅಂಡ ಆರ್ಡರ್ ಮೇಂಟೇನ ಮಾಡುವ ಪೋಲಿಸಿನವರು ರಿಪೋರ್ಟ್ ಮಾಡುತ್ತಾರೆ. ಈ ಊರಿನಲ್ಲಿ ಇಂಥ ನಾಟಕ ಆಡುತ್ತಾರೆ ಇದರಿಂದ ದುಷ್ಪರಿಣಾಮ ಉಂಟಾಗುತ್ತದೆ, ಅನ್ಯಾಯವಾಗುತ್ತದೆ ಎಂದು ತಿಳಿಸುತ್ತಾರೆ. ಸ್ವಾಮಿ, ನಾನು ಈ ಮೊದಲು ಲಂಚಾವತಾರ, ಹಳ್ಳಿ ಹುಡುಗಿ ನಾಟಕ ಬಗ್ಗೆ ಹೇಳಿದ್ದೇನೆ. ಈ ನಾಟಕಗಳಲ್ಲಿ ಅಂಥ ವಿಶೇಷ ಏನೂ ಇಲ್ಲ. ಕಂಟ್ರೋಲ್ ಮಾಡತಕ್ಕದ್ದು ಏನೂ ಇಲ್ಲ. ಇದನ್ನು ನಾನು ಏತಕ್ಕೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆಂದರೆ ಆಡಳಿತದಲ್ಲಿ ಕೋ-ಆರ್ಡಿನೇಷನ್ ಇಲ್ಲ. ಡೆಪ್ಯುಟಿ ಕಮಿಷನರ್ ಅವರಿಗೆ ಯಾವ ವಿಷಯವೂ ತಿಳಿದಿರುವುದಿಲ್ಲ. ಅವರಿಗೆ ಈ ಅಧಿಕಾರ ಕೊಡಬೇಡಿ. ಅವರಿಗೆ ರೆವೆನ್ಯೂ ವಿಷಯ ಅಷ್ಟೇ ಗೊತ್ತಿರುತ್ತದೆ. ಡೀಸೆನ್ಸೀ ಅಥವಾ ಇನ್‌ಡೀಸೆನ್ಸೀ ಅಂದರೆ ಎನು ಎಂಬುದು ಸರಿಯಾಗಿ ಗೊತ್ತಿರುವುದಿಲ್ಲ.

ಆದ್ದರಿಂದ ನಾನು ಹೇಳುವುದೇನೆಂದರೆ ಯಾರು ಪ್ರತಿ ನಿತ್ಯ ಕಾನೂನು ಕಟ್ಟಲೆಗಳ ನೆರಳಿನಲ್ಲಿ ಕೆಲಸ ಮಾಡುತ್ತಾರೆ ಅಂತಹವರಿಗೆ ಈ ಅಧಿಕಾರ ಇರಬೇಕು. ಈ ಅಧಿಕಾರವನ್ನು ಡೆಪ್ಯುಟಿ ಕಮಿಷನರಿಗೆ ಕೊಡಬೇಡಿ. ಪೋಲೀಸ್‌ನವರು ಅಥವಾ ಯಾವುದಾದರೂ ಒಂದು ಪಾರ್ಟಿಯವರು ಕೊಟ್ಟಂತಹ ದೂರಿನ ಮೇಲೆ ಅದನ್ನು ವಿಚಾರಣೆ ಮಾಡತಕ್ಕ ಅಧಿಕಾರವನ್ನು ಎಕ್ಸಿಕ್ಯೂಟೀವ್ ಆಫೀಸರಾಗಿರತಕ್ಕ ಡೆಪ್ಯೂಟಿ ಕಮಿಷನರಿಗೆ ಕೊಟ್ಟರೆ ನ್ಯಾಯ ಯಾವ ಕಡೆಗೆ ವಾಲುತ್ತದೆ ಎಂಬುದು ಸರ್ವರಿಗೂ ವಿದಿತವಾದ ವಿಷಯ. ಆದ್ದರಿಂದ ನನ್ನ ಅರಿಕೆ ಏನೆಂದರೆ Instead of the Deputy Commissioner give it to a Civil Judge or a District Magistrate. ನಮ್ಮಲ್ಲಿ ಸಿವಿಲ್ ಜಡ್ಜ್ ಅಂಡ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಎಂತಲೂ ಹೇಳುತ್ತಾರೆ. ಅದಕ್ಕೆ ತಾವು ಇಲ್ಲಿ ಏನೇನು ಹೇಳಿದಿರಿ ಈ ಎಲ್ಲಾ ಪದಗಳ ಅರ್ಥವನ್ನೂ ದೀರ್ಘವಾಗಿ ಯೋಚನೆ ಮಾಡಿ ಒಂದು ತೀರ್ಪಾನವನ್ನು ತೆಗೆದು ಕೊಳ್ಳುವುದಕ್ಕೆ ಡೆಪ್ಯೂಟಿ ಕಮಿಷನರಿಗೆ ಅಧಿಕಾರ ಕೊಡಬಾರದು ಎಂದು ನಾನು ಹೇಳುತ್ತೇನೆ.

ಈಗ ಚೆಕ್ಸ್ ಬುಕ್ ಬರೆಯುವುದಕ್ಕೆ ಒಂದು ಕಮಿಟಿ ಇದೆ. ಸಿನಿಮಾಗಳನ್ನು ಸೆನ್ಸಾರ್ ಮಾಡುವುದಕ್ಕೆ ಸೆನ್ಸಾರ್ ಬೋರ್ಡ್ ಇದೆ. ಮೈಸೂರು ಸಂಸ್ಥಾನದಲ್ಲಿ ಖ್ಯಾತ ನಾಟಕಗಳನ್ನು ಬರೆಯತಕ್ಕ ನಾಟಕಕಾರರು ಯಾರಿದ್ದಾರೆ ಅಂತಹವರ ಒಂದು ಕಮಿಟಿಯನ್ನು ಮಾಡಿ.

Mr. SPEAKER.—Statewise, districtwise or talukwise ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದು ರೀಸನಬಲ್ ಆಗಿದೆ ಎಂದು ಅವತ್ತು ಗೃಹ ಸಚಿವರು ಹೇಳಿದ್ದರು, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ದೀರ್ಘವಾಗಿ ಆಲೋಚನೆ ಮಾಡುತ್ತಾರೆ ಎಂತಲೂ ಹೇಳಿದ್ದರು ಆದರೆ ಇದು ಇಲ್ಲವೇ ಇಲ್ಲ ಇಲ್ಲ.

ಅಧ್ಯಕ್ಷರು.—ರೂಲ್ಸ್‌ನಲ್ಲಿ ಮಾಡಬಹುದ .

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಲ್ಲ ಸ್ವಾಮಿ ಎಳೆಯದರಲ್ಲಿ ಬಗ್ಗದ್ದು ದೊಡ್ಡದಾದ ಮೇಲೆ ಸಾಧ್ಯವೇ ಅಂತ.

ಅಧ್ಯಕ್ಷರು.—ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ಎಂದು ಹೇಳುತ್ತೀರಾ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರಪ್ರಥಮವಾಗಿ ತರತಕ್ಕ ಥೆವೀಯಕದಲ್ಲೇ ಅಂತಹ ಒಂದು ಪ್ರೊವಿಜನ್ ಇಡದೇ ಹೋದರೆ ರೂಲ್ಸ್‌ನಲ್ಲಿ ಎಷ್ಟೋ ಅಂತ ಮಾಡುತ್ತಾರೆ ! ಆದಕ್ಕೇ ಸ್ವಾಮಿ ಗೃಹಸಚಿವರಲ್ಲಿ ಇಷ್ಟೇ ನನ್ನ ಪ್ರಾರ್ಥನೆ. ಈ ನಾಟಕದ ಬಲ್ಲಿಗೆ ನಾನು ವಿರೋಧವಾಗಿಲ್ಲ, ಡೆಪ್ಯೂಟಿ ಕಮಿಷನರಿಗೆ ಕೊಟ್ಟಿರುವ ಅಧಿಕಾರವನ್ನು ತೆಗೆದು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ಕೊಡಿ ಇದು ಒಂದನೆಯದು, ನಾಟಕಗಳನ್ನು ಏಪ್ರಿರ್ ಮಾಡತಕ್ಕ ಒಂದು ಬೋರ್ಡನ್ನು ಮಾಡಿ ಇದು ಎರಡನೆಯದು. ಇವತ್ತು ರಾಜ್ಯದಲ್ಲಿ ಕಲೆಯ ಕೊಲೆ ಈ ಒಂದು ಸಣ್ಣ ಥೆಥೇಯಕದಿಂದ ಆಯಿತು ಎಂದು ಏನು ಇದೆ, ನಾಟಕ ಆಡುವವರು, ನಾಟಕಕಾರರು ಹಾಳಾಗಿ ಹೋದರು ಎಂಬ ಶಂಕೆ ಏನು ಇದೆ ಅದನ್ನು ದೂರ ಮಾಡುವುದಕ್ಕೆ ನಾನು ಈ ಪೊದರೇ ಹೇಳಿದಂತೆ ಮಾಡುವುದು ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ. ನಾನು ಅನೇಕ ನಾಟಕಗಳನ್ನು ನೋಡಿದ್ದೇನೆ. ಅಲ್ಲ ಅರ್ಧ ಗಂಟೆ ಕೂಡ ಕುಳಿತು ಕೊಳ್ಳುವುದಕ್ಕೆ ಸಾಧ್ಯವಿಲ್ಲ; ಒಬ್ಬ ಹುಡುಗ ಅಥವಾ ಹುಡುಗಿ ಕಥೆ, ಇಲ್ಲವೇ ಕಳ್ಳತನ ಮಾಡುವುದು, ಸುಳ್ಳು ಹೇಳುವುದು, ದಗಾ ಹಾಕುವುದು ಇಂತಹ ಸನ್ನಿವೇಶಗಳನ್ನು ರಾತ್ರಿ ಎರ್ಲಾ ನಿದ್ದೆಗೆಟ್ಟು ನೋಡಿಕೊಂಡು ಬರುತ್ತಾರೆ. ಆದ್ದರಿಂದ ಸರ್ಕಾರದ ಪರವಿಂದ ಈ ಎರಡು ಕೆಲಸಗಳು ಎಂದರೆ ಡೆಪ್ಯೂಟಿ ಕಮಿಷನರಿಗೆ ಇರತಕ್ಕ ಅಧಿಕಾರವನ್ನು ತೆಗೆದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಕೊಡುವುದು ಮತ್ತು ಸೆನ್ಸಾರ್ ಬೋರ್ಡ್ ಮಾಡುವುದು ಬಹಳ ಅಗತ್ಯ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ಈಗಾಗಲೇ ಜಾಯಿಂಟ್ ಕಮಿಟಿಯಿಂದ ಹೊರ ಬಿದ್ದಿರುವ ಈ ನಾಟಕ ಮಸೂದೆಯಲ್ಲಿ ಏನಾದರೂ ಸ್ವಲ್ಪ ಬದಲಾವಣೆಯಾಗಿ ಏನಾದರೂ ಒಂದು ಒಳ್ಳೆಯ ಮಸೂದೆಯಾಗುತ್ತದೆ ಎಂಬ ಆಶೆ ಇಟ್ಟುಕೊಂಡಿರುವ ಈ ಮಾನ್ಯ ಸಭೆಗೆ ಬಹಳ ನಿರಾಶಾಯಕವಾಗಿದೆ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋದ ಈ ಮಸೂದೆಯಲ್ಲಿ ಯಾವ ಒಂದು ಹೆಚ್ಚಿನ ಬದಲಾವಣೆಯೂ ಇಲ್ಲ, ಪೊದಲು ಹೇಗೆ ಇತ್ತೋ ಈಗಲೂ ಹಾಗೆಯೇ ಇದೆ.

ಶ್ರೀ ಆರ್. ಎಂ. ಪಾಟೀಲ್.—ನೀವು ತಿದ್ದುಪಡಿಗಳನ್ನು ಕೊಡಬಹುದಾಗಿತ್ತು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಮಸೂದೆಯಲ್ಲಿರುವ 6ನೇ ವಿಧಿಯನ್ನು ನೋಡಿದರೆ ಅದರಲ್ಲಿ 'ಅಸಹ್ಯ' ಇಲ್ಲದೇ ಇದ್ದರೆ 'ಅಶ್ಲೀಲ' ಎಂಬ ಪದಗಳನ್ನು ಉಪಯೋಗಿಸಿದ್ದೀರಿ. ಯಾವ ನಮೂನೆಯಲ್ಲಿ ತಾವು ಅಸಹ್ಯ ಅಥವಾ ಅಶ್ಲೀಲ ಎಂಬ ತೀರ್ಮಾನಕ್ಕೆ ಬರುತ್ತೀರಿ ಎಂಬ ವಿಷಯ ಒಂದು ದೊಡ್ಡ ತೊಂದರೆಯಾಗಿ ಪರಿಣಮಿಸಿದೆ. ಇದನ್ನು ಯಾರು ನಿರ್ಧಾರ ಮಾಡುವವರು ? ಒಂದು ಜಿಲ್ಲೆಯ ಒಬ್ಬ ಡೆಪ್ಯೂಟಿ ಕಮಿಷನರು ಇದನ್ನು ನಿರ್ಧಾರ ಮಾಡುತ್ತಾರೆ ಎಂದರೆ ಅವರಿಗೆ ಕಲೆಯಲ್ಲಿ ಸಾಹಿತ್ಯದಲ್ಲಿ ಅಭಿರುಚಿ ಇರುತ್ತದೆಯೇ ! ಅಂತಹವರು ಅಲ್ಲಿ ಇರುತ್ತಾರೆಯೇ ಎಂಬುದನ್ನು ನಾವು ವಿಚಾರ ಮಾಡಿ ನೋಡಬೇಕಾಗುತ್ತದೆ. ನಾಟಕ ಕಲೆಯಲ್ಲಿ ಅಭಿರುಚಿ ಇರುವವರು, ಅಭ್ಯಾಸ ಮಾಡಿರುವವರು ಅಲ್ಲಿರುವುದಿಲ್ಲ, ಆದ್ದರಿಂದ ಅವರಿಗೆ ಇದರ ಅನುಭವ ಇರುವುದಿಲ್ಲ. ಅಂತಹವರನ್ನು ಈ ನಿರ್ಧಾರವನ್ನು ಕೈಕೊಳ್ಳುವುದಕ್ಕೆ ನೇಮಕ ಮಾಡಿದ್ದೀರಿ. ಇದರ ಹಿನ್ನೆಲೆಯನ್ನು ನೋಡಿದರೆ ಇದಕ್ಕೆ ಬಲವಾದ ಹಿನ್ನೆರೆ ಇದೆ, ತಮ್ಮ ಪ್ರತಿಷ್ಠೆಯನ್ನು ಉಳಿಸಲು ಈ ರಾಜ್ಯದ ಕಲೆಗಾರರನ್ನು ಆಹುತಿ ಕೊಟ್ಟಿದ್ದೀರಿ ಎಂದು ಹೇಳುತ್ತೇನೆ.

Mr. SPEAKER.—"ಹಿನ್ನೆಲೆ" is over by the first reading.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸೆಕೆಂಡ್ ರೀಡಿಂಗ್‌ನಲ್ಲೂ ಬರುತ್ತದೆ, ಈ ಬಿಲ್‌ನಲ್ಲಿ ಯಾವ ಬದಲಾವಣೆಯೂ ಆಗಿಲ್ಲ ಪೊದಲು ಹೇಗೆ ಇತ್ತೋ ಈಗಲೂ ಹಾಗೆಯೇ ಇದೆ. ನೀವು ತಿದ್ದುಪಡಿಯನ್ನು ಕೊಡಲಿಲ್ಲ ಎಂದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ ! ನಾವು ಪೊದಲೇ ಇದಕ್ಕೆ ಒಪ್ಪಿಗೆ ಕೊಡಲಿಲ್ಲ ಎಂದಮೇಲೆ ತಿದ್ದುಪಡಿಯನ್ನು ತಂದಾದರೂ ಏನು ಪ್ರಯೋಜನ ?

Sri R. M. PATIL.—The whole question is the member should have considered the whole enactment as objectionable. Now he cannot revert to the first reading stage.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಮ್ಮ ವಿರೋಧಪಕ್ಷದ ಸದಸ್ಯರು ಆ ಸರಕ್ಟ್ ಕಮಿಟಿಯಲ್ಲಿ ಹೇಳಿದ್ದನ್ನು ಸರ್ಕಾರದವರು ಒಪ್ಪಿಕೊಂಡಿಲ್ಲ. ಏನೇ ಆಗಲೀ ಈ ಮಸೂದೆಯು ಕನ್ನಡ ಕಲೆಗೆ ಒಂದು ಕೊಡಲಿ ಪೆಟ್ಟನ್ನು ಬಲವಾಗಿ ಹಾಕಿದಂತಾಗಿದೆ. ಈಗಾಗಲೇ ನಮ್ಮ ವಿರೋಧ ಪಕ್ಷದ ಕೆಲವು ಸದಸ್ಯರು ಆ ಸಮಿತಿಯಲ್ಲಿ ವಿರೋಧಿಸಿರತಕ್ಕ ವಿಚಾರಗಳು ಬಹಳವಾಗಿದೆ. ಅಷ್ಟೇ ಅಲ್ಲದೆ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಹೇಳುವಂತೆ ಅಶ್ಲೀಲವಾದ ಅಸಹ್ಯವಾದಂಥ ನಾಟಕಗಳನ್ನು ತಡೆಗಟ್ಟುವುದಕ್ಕೆ ನಮ್ಮಲ್ಲಿ ಹಾಲಿ ಬೇಕಾದಷ್ಟು ಕಾನೂನುಗಳಿವೆ. ಇಂಡಿಯನ್ ಪೀನಲ್ ಕೋಡಿದೆ, ಕ್ರಿಮಿನಲ್ ಪ್ರೊಸೀಜರ್ ಕೋಡಿದೆ, ಪೋಲೀಸ್ ಆಕ್ಟಿದೆ. ಇಷ್ಟೆಲ್ಲಾ ಇರುವಾಗ ಇದನ್ನೂ ತಂದು ಏಕೆ ಇಡಲಿಲ್ಲ ಕಾನೂನುಗಳ ಅತಿವ್ಯಷ್ಟಿಯನ್ನು ಮಾಡಿ ತಮ್ಮ ಒಂದು ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಕನ್ನಡ ನಾಡಿನ ನುಡಿಯ ಚಿಗುರನ್ನು ಕೊಯ್ದುಹಾಕುವುದಕ್ಕೆ ಹೊರಟಿದ್ದಾರೆ. ಈ ದಿವಸ ಕನ್ನಡ ಸಾಹಿತ್ಯದ ಸ್ವಂತ ಅನುಭವವಿಲ್ಲದವರು ಯಾವುದಾದರೊಂದು ಪೌರಾಣಿಕ ನಾಟಕದಲ್ಲಿ ಅಂದರೆ ರಾಮಾಯಣ ಅಥವಾ ಮಹಾಭಾರತದಲ್ಲಿ ಬರತಕ್ಕ ಆ ದ್ರೌಪದಿ ಅಥವಾ ಅರ್ಜುನ ಆ ಸುಭದ್ರೆಯನ್ನು ಹೊತ್ತುಕೊಂಡು ಹೋದಂಥ ಒಬ್ಬ ವೇಷಧಾರಿಯ ಪಾತ್ರವನ್ನು ಒಂದು ಈಗಿನ ಸಾಮಾಜಿಕ ನಾಟಕದಲ್ಲಿ ಅಭಿನಯಿಸಿದರೆ ಅದನ್ನು ಅಶ್ಲೀಲವೆಂದೂ, ಅಂಥಾ ನಾಟಕವನ್ನು ಆಡಬಾರದೆಂದೂ ನಾಳೆ ಈ ಕಾನೂನಿಂದ ಅಡ್ಡಿಪಡಿಸಬಹುದು. ಹೀಗಾದರೆ ಈಗಿನ ಪ್ರಜಾಪ್ರಭುತ್ವದಲ್ಲಿ ಅಧಿಕಾರವ್ಯಂದದಲ್ಲಿರತಕ್ಕ ಲಂಚೆ, ನ್ಯಜನ ಪಕ್ಷಪಾತ ಇವುಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವೇ ಇರುವುದಿಲ್ಲ. ಇಂಥಾ ಮಸೂದೆಯನ್ನು ನಾವು ಒಪ್ಪಿಕೊಂಡರೆ ಮುಂದೆ ಬಹಳ ತೊಂದರೆ ಆಗುತ್ತದೆ.

ಸಮಾಜಹಿತದೃಷ್ಟಿಯಿಂದ, ಸಮಾಜದ ಏಳಿಗೆಗೆ ನಾಡಿನಲ್ಲಿ ಕಲೆಗೆ ಇಂಥಾ ಪಿಡುಗನ್ನು ತರಬಾರದು. ಕಲಾಕಾರರು ಕೆಲವರು ಹೊಟ್ಟೇ ಪಾಡಿಗಾಗಿಯೂ ಇದನ್ನು ನಡೆಸುತ್ತಿದ್ದಾರೆ. ಇದರಿಂದ ಅವರ ಜೀವನಕ್ಕೆ ಬಹಳ ತೊಂದರೆ ಬರುತ್ತದೆ. ಅವರು ಡೆಪ್ಯುಟಿ ಕಮಿಷ್ನರ್ ತೀರ್ಮಾನದ ಮೇಲೆ ಅಪೀಲು ಹೋಗಬೇಕಾದರೆ ಹೈ ಕೋರ್ಟಿಗೇ ಅವರು ಬರಬೇಕಾಗಿದೆ. ಅವರಲ್ಲಿ ಅಂಥಾ ದುಡ್ಡಿಸ್ಥರಿಲ್ಲ. ಅವರಲ್ಲಿ ಅಂಥಾ ಬಂಡವಾಳಸ್ಥರಿಲ್ಲ. ಹಳ್ಳಿಗಳಲ್ಲಿ ಒಂದು ಪರದೆ ಇಟ್ಟುಕೊಂಡು ನಾಟಕ ನಡೆಸುತ್ತಾರೆ.

ಶ್ರೀ ಆರ್. ಎಂ. ಪಾಟೀಲ್.—ನಿಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಈ ಕಾನೂನು ಇಲ್ಲಿಗೆ 9 ವರ್ಷಗಳಿಂದ ಜಾರಿಯಲ್ಲಿದೆ. ಹೀಗೆ ಈ ಶಾಸನ ಅಮಲು ಬಜಾವಣೆಯಲಿದ್ದರೂ ನೀವೀಗ ಇದನ್ನು ವಿರೋಧಿಸುತ್ತಿದ್ದೀರಿ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಮ್ಮಲ್ಲಿ ಇಂಥಾ ಕಾನೂನು ಜಾರಿಯಲ್ಲಿಲ್ಲ. ನಮ್ಮಲ್ಲಿರತಕ್ಕವರೆಲ್ಲ ಬಡಕಲಾವಿದರು. ಅವರು ಹೈ ಕೋರ್ಟಿಗೆ ಬರಲು ಸಾಧ್ಯವಿಲ್ಲ. ಅಂತೂ ತಾವು ಈ ಕಲಾಭಿಮಾನಿಗಳ ಬೇರನ್ನು ಕಿತ್ತೊಗೆಯಲು ಹೊರಟಿದ್ದೀರಿ. ಇದರಲ್ಲಿ ಯಾರೇನೇ ಆಗಲೀ ತಮ್ಮ ಸ್ವಪ್ರತಿಷ್ಠೆ ಮಾತ್ರ ಉಳಿಯಬೇಕಾಗಿದೆ.

ಇನ್ನು ಒಂದು ನಾಟಕ ಆಕ್ಷೇಪಣೀಯವೆಂದು ಕಂಡುಬಂದ ಪಕ್ಷದಲ್ಲಿ ಅವರಿಗೆ ಒಂದು ಸಾವಿರ ರೂಪಾಯಿಗಳ ದಂಡ, ಮತ್ತು ೩ ತಿಂಗಳು ಸಜಾ ಇವೆರಡನ್ನೂ ವಿಧಿಸಬಹುದು ಎಂದು ಇಲ್ಲಿ ಹೇಳಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಪಾಸ್ ಕೊಡದಿದ್ದರೆ ಹಾಗೆ ಮಾಡುತ್ತಾರೆ. (ನಗು).

ಶ್ರೀ ಬಿ. ಭಾಸ್ಕರ ಶೆಟ್ಟಿ.—ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಸರ್ಕಾರ ಯಾವ ರೀತಿ ಆಡಳಿತ ನಡೆಸಲಕ್ಕೆ ಹೊರಟಿದೆಯೆಂದರೆ, ಸರ್ವಂ ಭಕ್ಷಯಾಮಿ, ಸಾಗರಂ ಭಕ್ಷಯಾಮಿ ಎಂದು ಹೇಳುವಂತೆ ದೇಶದಲ್ಲಿರತಕ್ಕ ನಾಗರೀಕರನ್ನೂ, ಕಲೆಗಾರರನ್ನೂ ಸರ್ಕಾರ ಈಗ ಭಕ್ಷಿಸಲಕ್ಕೆ ಹೊರಟಿದೆ. ಒಂದು ಕಡೆ ಕಾನೂನಿನ ಅತಿವ್ಯಷ್ಟಿಯಾಗಿ, ಇನ್ನೊಂದು ಕಡೆ ಕಲೆಗಾರರ ಅನಾವಷ್ಟಿ ಆಗಿದೆ. ಈ ಕಾನೂನನ್ನು ಮಾನ್ಯ ಮಂತ್ರಿಗಳು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈಗ ಸರ್ಕಾರದವರು ಸಭೆಯಮುಂದೆ ತಂದಿರತಕ್ಕ ಮಸೂದೆ ಆಡಳಿತ ಪಕ್ಷಕ್ಕೂ ಮತ್ತು ಸರ್ಕಾರಕ್ಕೂ ಬಹಳ ಅವಹೇಳನವನ್ನುಂಟು ಮಾಡುವಂಥ ಒಂದು ಮಸೂದೆ ಆಗಿದೆ. ಇವರಲ್ಲಿ ಮೊದಲು ಅಧಿಕಾರ ಪಕ್ಷದವರು, ಆಮೇಲೆ ಇದಕ್ಕೆ ಇನ್ನು ಯಾರು ಯಾರು ಬಲಿಯಾಗುತ್ತಾರೆಂದರೆ. ಭೂಮಿ ಕೊಟ್ಟವರು, ನಟನಟಿಯರು, ಇದರಲ್ಲಿ ದೊಡ್ಡ ಬಲಿಯಾಗತಕ್ಕದ್ದೆರಿದರೆ ನಾಟ್ಯಕಾರನ ಪ್ರತಿಭೆ. ನಾಟಕಕಾರ ರಂಗಭೂಮಿಯ ಮೇಲೆ ಬಂದನೆಂದರೆ—ಅವನು ಮುಂದೇನು ಹೇಳುತ್ತಾನೆಂಬುದು ಅತನಿಗೇ ಗೊತ್ತಿರುವುದಿಲ್ಲ. ಅವನು ದೇಶದ ಎಲ್ಲಾ ಮಟ್ಟಗಳ ಜನತೆಯ ಆಶೋತ್ತರಗಳನ್ನು ಮೈಗೂಡಿಸಿಕೊಂಡಿರುತ್ತಾನೆ. ಆ ಪ್ರತಿಭೆ ಅವನ ಬಾಯಿಂದ ತಾನೇ ತಾನಾಗಿ ಹೊರಡುತ್ತಿರುತ್ತದೆ. ಇದನ್ನು ಹೀಗೇ ಪ್ರತಿಬಿಂಬಿಸ

(ಶ್ರೀ ಎ. ಎಂ. ದೇವ್)

ಬೇಕೆಂಬ ವಿಚಾರ ಯಾವ ಪಠ್ಯ ಪುಸ್ತಕದಲ್ಲಿಯೂ ಇರುವುದಿಲ್ಲ. ಆದರೆ ಶ್ರೀ ಮುಕ್ಕಣ್ಣಪ್ಪನವರು ಕೆಲವು ವಿಷಯಗಳನ್ನು ನಜೆಸ್ಟ್ ಮಾಡಿದ್ದಾರೆ. ಆದರೆ ನಂದರ್ಭಗಳು ಹೇಗೆ ಬರುತ್ತವೆಯೋ ಹೇಳುವುದಕ್ಕಾಗುವುದಿಲ್ಲ. ತಾವೇನು ಮಾಡುತ್ತಿದ್ದೀರಿ ಎಂದರೆ ನಾಟಕ ಎನ್ನುವುದು ಆದರಲ್ಲೂ ಕನ್ನಡದ ನಾಟಕಗಳು ನಮ್ಮ ದೇಶದಲ್ಲಿ ಹೊದಲು ಮುಂದುವರಿದಿರಲಿಲ್ಲ. ಹೊದಲು ಇದು ಬಂದದ್ದು ಮಹಾರಾಷ್ಟ್ರದಲ್ಲಿ ಆದಾದ ಮೇಲೆ ಮೈಸೂರಿಗೆ ಬಂದಿದೆ. ಆದಾದ ಮೇಲೆ ಬಂಗಾಳದಲ್ಲಿ ಬಂತು. ಹೀಗೆ ನಾಟಕಗಳು ಈ ದೇಶದಲ್ಲಿ ಮುಂದಕ್ಕೆ ತರುವುದಕ್ಕೆ ಬದಲಾಗಿ ಇದರ ಸ್ಥಿತಿ ಅಧೋಗತಿಗೆ ಇಳಿಯುತ್ತಿದೆ ಎನ್ನುವುದನ್ನು ನಾನು ಮಾನ್ಯ ಗೃಹಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಇದರಲ್ಲಿ ಮಾನ್ಯ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಕಾನ್ಸ್‌ಟಿಟ್ಯೂಷನಲ್ ಅಬ್‌ಜಕ್ಷನ್ನುಗಳು ಕೂಡ ಬರುತ್ತದೆ. ಕೆಲವು ಪುಸ್ತಕಗಳನ್ನು ನಾಟಕಗಳಿಗಾಗಿ ಬರೆಸಿದರೆ ಅದು ಆಕ್ಷೇಪಣಾರ್ಹವಾಗುವುದಿಲ್ಲ ಎಂದು Freedom of Expression ಗಾಗಿ ಎಂದಿರುವ ನಾಟಕಗಳನ್ನು ನಿಲ್ಲಿಸಬೇಕೆಂದರೆ ಹೇಗೆ? ನಾಟಕ ಎಂತಹದು ಇರಬೇಕು ಎನ್ನುವುದನ್ನು ಹೇಳುವ ದಾರ್ಢ್ಯ ನಿಮ್ಮಲ್ಲಿಲ್ಲದೇ ಇರುವಾಗ ನೀವು ಈ ಮಸೂದೆ ಮಾಡಿದರೆ ಏನು ಬೆರೆ ಬರುತ್ತದೆ? ಇಂತಹ ಕಾನೂನುಗಳನ್ನು ಮಾಡುವುದರಿಂದ ನಾಟಕಕ್ಕೆ ಸರಿಯಾದ ಪ್ರೋತ್ಸಾಹ ದೊರಕುವುದಿಲ್ಲ ಇವು ಹಾಳಾಗುತ್ತವೆ ಮತ್ತು ಈ ಕ್ಷೇತ್ರ ಇನ್ನಷ್ಟು ಹೊಲಸಾಗುತ್ತದೆ.

ಇದರಲ್ಲಿರುವ ಡಿಸ್ಸೆಂಟು ನೋಟಿನಲ್ಲಿ:

4-00 P.M.

"This Bill gives rise to an anomalous situation in that a drama which is allowed in print will be prohibited to be staged..."

ಎಂದಿದೆ. ಈ ದೃಷ್ಟಿಯಿಂದ ನೀವು ಎಂತಹವರು ಎನ್ನುವುದನ್ನು ಬಹಳ ಆಳವಾಗಿ ಯೋಚನೆ ಮಾಡಬೇಕಾಗುತ್ತದೆ. ಉದ್ದಿಶ್ಯ ನಿಮ್ಮದುರ್ವ್ಯಾಪಾರ ಮರೆಮಾಚಲೆಂದು ಏಕೆಂದರೆ ಬುಕ್ ಸೆನ್ಸಾರ್ ಎನ್ನುವುದು ಎಲ್ಲೆಲ್ಲಿಯೂ ಇದೆ. ಅದನ್ನೆಲ್ಲಾ ನೋಡದೆ ಯಾವ ಮಟ್ಟದ ಮೇಲೆ ಇದರಲ್ಲಿ ಕಷ್ಟ ಇದೆ ಎಂದು ಈ ಕಾನೂನು ಮಾಡುತ್ತಿದ್ದೀರಿ. ಇದರಲ್ಲಿರುವ ಪೆನಾಲ್ಟಿ ಎನ್ನುವುದರ ಮೇಲೆ ಅಪೀಲು ಹೋಗುವುದಕ್ಕೆ ಕ್ಲಾಜು 10ರಲ್ಲಿ ಹೈ ಕೋರ್ಟಿಗೆ ಅಪೀಲು ಹೋಗಬಹುದು ಎಂದು ಹೇಳಿದ್ದಾರೆ. ಈ ಕಾಲದಲ್ಲಿ ನಾಟಕಗಳನ್ನೇ ನಡೆಸಬೇಕಾದರೆ ಎಷ್ಟೋ ಕಷ್ಟಗಳಿರುತ್ತವೆ. ಈ ಕಷ್ಟಗಳ ಜೊತೆಗೆ ಹೈಕೋರ್ಟಿಗೂ ಅಪೀಲು ಹೋಗಲು ದಾರಿ ಮಾಡಲು ಹೋಗಿರುವುದು ಸ್ವಲ್ಪ ಸಾಧುವಾದುದಲ್ಲ. ನಾಟಕದ ಮಟ್ಟ ಜನಜೀವನ ಪ್ರತಿಯೊಂದು ಹಂತದಲ್ಲೂ ಬಿಂಬಿತವಾಗುತ್ತದೆ. ಜನರ ಮಟ್ಟವನ್ನು ತೂಗಿ ನೋಡಲು ಈ ನಾಟಕ ಒಂದು ದಾರಿಯಾಗಿದೆ. ನಿಜವಾಗಿಯೂ ನಾಟಕ ಹೇಗಿದೆ ಎಂದರೆ ಇದೊಂದು ಕರಾಣಿ ಅಂಗಡಿಯಂತೆ ಇದೆ. ಎಲ್ಲಾ ಮಟ್ಟಗಳ ಅಭಿರುಚಿಗಳೂ ಬಿಂಬಿತವಾಗಿರುತ್ತವೆ. ಹೀಗಿರುವಾಗ ನೀವು ಅಧಿಕಾರದಲ್ಲದ್ದೀರಿ ನಮ್ಮನ್ನು ಕೇಳುವವರೇ ಇಲ್ಲ ಎನ್ನುವಂತೆ ಈ ತರಹದ ಕಾನೂನನ್ನು ತರುವುದು ಸರಿಯೇ ಎಂದು ನಾನು ಕೇಳಬೇಕಾಗಿದೆ. ಜನ ಜೀವನದ ಮಟ್ಟ ಇವೊತ್ತು ಅಷ್ಟು ಹಾಳಾಗಿ ಹೋಗಿದೆಯೇನು? ನಮ್ಮ ದೇಶದ ಆಡಳಿತ ಮಟ್ಟ ಹಾಗೂ ಜೀವನದ ಮಟ್ಟ ಕೂಡ ಪಾಸ್ತಿಯಾದ ಹಾಗೆ ನಾಟಕದ ಮಟ್ಟವೂ ಪಾಸ್ತಿಯಾಗುತ್ತದೆ. ತಾವು ಜನ ಜೀವನದ ಅವಶ್ಯಕತೆಗಳೊಂದನ್ನೂ ನೋಡದೆ ಯಾವ ಯಾವುದಕ್ಕೊ ತಾಳೆ ಹಾಕಿಕೊಂಡು ಈ ನಾಟಕಕ್ಕೆ ಕೆ ತೊಂದರೆಗಳನ್ನು ತಂದು ಇಡುತ್ತಿದ್ದೀರಿ? ಫ್ರಾನ್ಸ್‌ನಲ್ಲಿ ಹಿಂದೆ ಅಶ್ಲೀಲ ಪುಸ್ತಕಗಳು ಹಾಗು ಚಿತ್ರಲೆಯಿಂದಿರುವ ಚಿತ್ರಗಳು ಬರುತ್ತಿದ್ದವು. ಇದರಿಂದ ಆ ದೇಶದ ರಾಜಕಾರಣಿಗಳಿಗೆ ತಿದ್ದಿ ದಾರಿಯಾಗುತ್ತಿತ್ತೆಂಬುದು ಎಲ್ಲರಿಗೂ ತಿಳಿದ ವಿಷಯ. ಇದರಿಂದ ಜೀವನದ ಮಟ್ಟ ಹೆಗಾಗುತ್ತದೆ ಎನ್ನುವದಕಾಗಿ ಇಲ್ಲಿ ಹೇಳುತ್ತಿಲ್ಲವೆನೆ. ನಮ್ಮ ಜೀವನ ಹೀಗಾದರೆ ಇನ್ನು ಮುಂದೆ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಮುಂದಕ್ಕೆ ಮಾಡಲು ದಾರಿಯಾಗುತ್ತದೆ; ಎಂದು ಪ್ರಪಂಚದಲ್ಲಿರುವ ದೊಡ್ಡ ದೊಡ್ಡ ಮಹಾನುಭಾವರುಗಳು ಹೇಳಿದ್ದಾರೆ. ಇಂತಹ ಕಾನೂನನ್ನು ತರುವುದು ಬುದ್ಧಿವಂತಿಕೆಯೇ ಎಂದು ನಾನು ಕೇಳುತ್ತಿದ್ದೇನೆ. ಇದನ್ನು ಪ್ರಿಸ್ಟೀಜು ಇಷ್ಯೂ ಮಾಡಿಕೊಂಡು ನಿಂತುಕೊಳ್ಳಬೇಡಿ. ನಮ್ಮ ದೇಶದ ಜನಜೀವನದಲ್ಲಿ ಇದರಿಂದ ಒಂದು ಉನ್ನತ ಮಟ್ಟಕ್ಕೆ ಬರುವ ಮಾರ್ಗದಲ್ಲಿ ಮಾಡಿಕೊಂಡು ಬರುವ ಈ ಸಮಾಜದಲ್ಲಿ ಈ ರೀತಿ ಇರುವುದು

ನರಿಯಲ್ಲ. ಈ ದೃಷ್ಟಿಯಿಂದ ಈ ಬಿಲ್ಲನ್ನು ಕೈ ಬಿಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಪೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಮೈಸೂರು ಡ್ರಮಾಟಿಕ್ ಪರ್‌ಫಾರ್ಮೆನ್ಸಸ್ ಮಸೂದೆಯನ್ನು ಯಾವ ಉದ್ದೇಶಕ್ಕಾಗಿ ಈ ಸಭೆಯ ಮುಂದೆ ತಂದಿದ್ದಾರೆನ್ನುವುದು ನನಗಾದರೂ ಅರ್ಥವಾಗುತ್ತಿಲ್ಲ. ಡೆಫಿನಿಷನ್ನು ಎಂದು 2ನೇ ಸೆಕ್ಷನ್ನಿನಲ್ಲಿ ಯಾವ ಯಾವ ವಿಷಯಗಳನ್ನು ಕೊಟ್ಟಿದ್ದಾರೋ ಅವೆಲ್ಲಾ ಇಂಡಿಯನ್ ಪೀನಲ್ ಕೋಡಿನಲ್ಲಿರುವ ಅಧಿಕಾರದಲ್ಲೇ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ದೇಶದಲ್ಲಿ ಕನ್ನಡ ನಾಟಕ ಕಲೆ ಬಹಳ ಹಿಂದುಳಿದಿದೆ. ನಾಟಕ ಕಲೆ ಉನ್ನತ ರೀತಿಯಲ್ಲಿ ಬೆಳೆದಿರುವ ಮಹಾರಾಷ್ಟ್ರ ತಮಿಳನಾಡು ಆಂಧ್ರದಲ್ಲಿ ಇಂಥಹ ಕಾನೂನು ತಂದಿಲ್ಲ. ಇಲ್ಲಿ ಬರುತ್ತಿದೆ. ಅದರಲ್ಲೂ ನಾವು ಇಲ್ಲಿ ಬಹಳ ಹಿಂದುಳಿದಿದ್ದೇವೆ. ಇತ್ತೀಚೆಗೆ ಕನ್ನಡ ನಾಟಕಗಳಿಗೆ ಸ್ವಲ್ಪ ಸ್ಥಾನ ಮಾನಗಳು ಸಿಗುತ್ತಿವೆ. ಈ ಸಂದರ್ಭದಲ್ಲಿ ನಾಟಕಗಳ ಬೆಳವಣಿಗೆಯನ್ನು ತಡೆಯುವುದಕ್ಕಾಗಿ ಸರಕಾರದವರು ಏಕೆ ಮನಸ್ಸು ಮಾಡಿದ್ದಾರೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮುಖ್ಯವಾಗಿ ನಮ್ಮ ಇತರ ಮಾನ್ಯ ಸ್ನೇಹಿತರು ತಿಳಿಸಿದ ಹಾಗೆ ನಾಟಕ ಶೀಲವೇ ಅಶ್ಲೀಲವೇ ಎನ್ನುವುದು ಜನಕ್ಕೆ ಒಪ್ಪಿಗೆಯಾಗುವುದೇ, ಇಲ್ಲವೇ ಎನ್ನುವುದನ್ನು ತೀರ್ಮಾನ ಮಾಡುವುದು ಬಹಳ ಮುಖ್ಯ ಪ್ರಶ್ನೆ.

4ನೇ ಸೆಕ್ಷನ್ನಿನಲ್ಲಿ ಜಿಲ್ಲಾಧಿಕಾರಿಗಳಿಗೆ ಪೂರ್ಣ ಅಧಿಕಾರವನ್ನು ಈ ಮಸೂದೆಯಲ್ಲಿ ಕೊಟ್ಟಿದ್ದೀರಿ. ನಮ್ಮ ಗೃಹಮಂತ್ರಿಗಳು ನನ್ನ ಸ್ನೇಹಿತರೊಬ್ಬರಿಗೆ ಉತ್ತರ ಕೊಡುತ್ತಾ ಹೇಳಿದರು: ಜಿಲ್ಲಾಧಿಕಾರಿಗಳಿಗೆ ಎಲ್ಲಾ ವಿಷಯ ತಿಳಿದಿರುತ್ತದೆ, ಅವರೇ ಅದಕ್ಕೆ ಲಾಯಕ್ಕಾದ ಜನ ಅಂತ. ಆದರೆ ಜಿಲ್ಲಾಧಿಕಾರಿಗಳ ಆಡಳಿತ ರೀತಿ, ಅವರ ಇತ್ತೀಚಿನ ಸಾರ್ವಜನಿಕರಲ್ಲಿ ನಡೆದುಕೊಳ್ಳುವ ರೀತಿ ನೋಡಿದರೆ ಅವರು ಆಡಳಿತದಲ್ಲಿರುವವರ ಕೈಗೊಂಬೆಗಳಾಗಿದ್ದಾರೆಂದು ನಾನು ಹೇಳಬಲ್ಲೆ. ವಿಧಾನಸೌಧದಿಂದ ಒಂದು ಫೋನ್ ಮುಖಾಂತರ ಒಂದು ನಾಟಕವನ್ನು ಆಡದಂತೆ ಮಾಡಬಹುದು. ಅವರನ್ನು ಕರೆಕ್ಟರು ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಎಂದು ಹೇಳಿ ಕರೆದುಕೊಂಡರೂ ಕೂಡ, ಅವರಿಗೆ ನಿಜವಾಗಿ ಸ್ವಂತವಾಗಿ, ವೈಯಕ್ತಿಕವಾಗಿ ಅಧಿಕಾರವನ್ನು ಜಾರಿ ಮಾಡುವ ಶಕ್ತಿಯಾಗಲಿ, ಅಥವ ರಾಜ್ಯದಲ್ಲಿ ಅಧಿಕಾರಿಗಳಿಗೆ ಅಂಥಹ ಪರಿಸ್ಥಿತಿಯಾಗಲಿ ಇದೆಯೆಂದು ನಾನು ಒಪ್ಪಿಕೊಳ್ಳುವುದಿಲ್ಲ ಅದಕ್ಕೆ ಒಂದಲ್ಲ ಹತ್ತು ಉದಾಹರಣೆಗಳನ್ನು ಈ ಸಭೆಗೆ ತಿಳಿಸುವುದಕ್ಕೆ ತಯಾರಿದ್ದೇನೆ. ಜಿಲ್ಲಾಧಿಕಾರಿಗಳು ಸರ್ಕಾರದ ಎಕ್ಸಿಕ್ಯೂಟೀವಿನ ಒಬ್ಬ ಏಜಂಟು. ರಾಷ್ಟ್ರದ ಸಾಮಾಜಿಕ ಆರ್ಥಿಕ ಜೀವನದಲ್ಲಿ ಬಹಳ ಮುಖ್ಯವಾದಂಥ ಬದಲಾವಣೆಗಳು ಆಗಬೇಕಾದಂಥ ಈ ಕಾಲದಲ್ಲಿ, ನಮ್ಮಲ್ಲರುವ ಗೊಡ್ಡು ಆಚಾರಗಳು, ಮಠಾಧೀಶ್ವರುಗಳಿಂದ ಅಧ್ಯಾತ್ಮಿಕ ಸೋಗಲ್ಲಿ ನಡೆಯುತ್ತಿರುವ ಶೋಷಣೆ, ಇವೆಲ್ಲವನ್ನೂ ತೊಡೆದುಹಾಕುವುದಕ್ಕೆ ನಾಟಕಕಲೆ ಅವಶ್ಯಕ. ಜನಗಳ ಮೇಲೆ ಪರಿಣಾಮಕಾರಿಯಾದ, ಹೊಸ ಕ್ರಾಂತಿಕಾರಕವಾದ, ಪ್ರಗತಿಪರವಾದ ಪ್ರಭಾವವನ್ನು ಬೀರಲು ನಾಟಕ ಕಲೆಯಿಬೇಕು. ಡೆಪ್ಯುಟಿ ಕಮಿಶನರುಗಳಿಗೆ ಯಾರಾದರೂ ಒಬ್ಬರು ಮಂತ್ರಿಗಳನ್ನು ಅಥವ ಆಳುವ ಪಕ್ಷದವರನ್ನು ಟೀಕೆ ಮಾಡುವುದನ್ನು ಕೇಳಿದರೆ ತಕ್ಷಣ ಕೋಪ ಬರಬಹುದು. ಏಕೆಂದರೆ ಅವರು ತಿಳಿದುಕೊಂಡಿರುವುದು, ದೇಶದಲ್ಲಿ ಯಾರು ಒಳ್ಳೆಯ ನಾಟಕ ಆಡುತ್ತಾರೆ, ಒಳ್ಳೆಯ ಸಂಗೀತ ಹಾಡುತ್ತಾರೆ—ಯಾವಾಗ? ಅವರ ಪ್ರಭುಗಳಾದ ಮಂತ್ರಿಗಳನ್ನು ಹೊಗಳಿದರೆ ಮಾತ್ರ—ಅವರಿಗೆ ಸಮಾಧಾನವಾಗುತ್ತದೆ. ಹಾಗೆಂದರೆ ಕಲೆಗಾರರು, ನಾಟಕ ಬರೆಯುವವರು ಡೆಪ್ಯುಟಿ ಕಮಿಶನರ ಮನೋಭಾವಕ್ಕೆ ಸರಿಯಾಗಿ ನಾಟಕ ಬರೆಯುವುದಾದರೆ ಇದು ನಿಜವಾಗಿಯೂ ಬಹಳ ಶೋಚನೀಯವಾದ ಪರಿಸ್ಥಿತಿ. ಜಿಲ್ಲಾಧಿಕಾರಿಗಳಿಗೆ ಈ ಅಧಿಕಾರವನ್ನು ಕೊಡುವುದರಿಂದ ನಾಟಕ ಕಲೆಯನ್ನು ಕೊಲೆ ಮಾಡುತ್ತೀರಿ. ನಮ್ಮ ಸರ್ಕಾರದ ಎಕ್ಸಿಕ್ಯೂಟೀವಿನ ಹಿಡಿತಕ್ಕೆ ಸಿಕ್ಕಿಸಿಕೊಂಡು ಬಾಲ್ಯಾವಸ್ಥೆಯಲ್ಲಿಯೇ ಕತ್ತು ಹಿಸುಕುವ ಉಪಾಯ. ನಾನು ಈ ದಿವಸ ತಿಳಿಸುವುದಾದರೂ ಇಷ್ಟೆ: ನಿಜವಾಗಿಯೂ ಕೂಡ ಈ ದೇಶದಲ್ಲಿ ನಮಗೆ ರಾಜ್ಯಾಂಗಬದ್ಧವಾಗಿ ಏನೇನು ಹಕ್ಕುಗಳು ದೊರಕಿವೆಯೋ ಅವುಗಳನ್ನು ಕಾಪಾಡುವುದರಲ್ಲಿ ನಿಮಗೆ ನಿಜವಾದ ಆಸಕ್ತಿ ಇದ್ದರೆ, ನಮ್ಮ ಕಲೆ, ನಾಟಕ ಬೆಳೆಯಬೇಕೆಂಬ ಆಸೆ, ಅಭಿಪ್ರಾಯವಿದ್ದರೆ ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಈ ಕಾನೂನು ಆಗಲೇಬೇಕೆಂಬ ಹಠವಿದ್ದರೆ, ಈ ಒಂದು ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡದೆ ಡಿಸ್ಟ್ರಿಕ್ಟ್ ಜಡ್ಜ್ ದರ್ಜೆಯ ನ್ಯಾಯಾಧೀಶರುಗಳಿಗೆ ಈ ಅಧಿಕಾರವನ್ನು ಕೊಡುವ ರೀತಿಯಲ್ಲಿ ಈ ಮಸೂದೆಯನ್ನು ಬದಲಾವಣೆ ಮಾಡಬೇಕು. ಇಲ್ಲದಿದ್ದರೆ ಇದರ ಪರಿಣಾಮ ಬಹಳ ಕೆಟ್ಟದ್ದಾಗುತ್ತದೆ ಎಂದು ಎಚ್ಚರಿಕೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

†Sri R. M. PATIL.—Sir, the Joint Select Committee considered all the aspects of the bill. The Hon'ble Members who participated in this bill, repeated mostly what was said during the first reading of the bill.

(SRI R. M. PATIL)

These very points were considered in great detail by the Committee, which accepted suggestions which were acceptable and rejected the rest of them as impracticable. The Committee has suggested amendments intended to do away with obstacles coming in the way of the implementation of the Act.

One of the Hon'ble Members referred to clause, the powers of the Deputy Commissioner. I must say that the Deputy Commissioner comes into the picture only when the dramatic performance is found objectionable. That too he can prohibit exhibition of the drama for a temporary period. This is done in the interest of maintenance of law and order. Even here Mr. Venkatai Gowda wants the same amendment as was suggested by the Joint Select Committee in respect of clause 3. If that were to be accepted, the importance of clause 4 would go. When the continuation of a drama would cause breach of peace, it should be stopped and not allowed to go on.

Coming to the other clauses, there is the clause about holding responsible the occupiers of premises. The Select Committee felt that sometimes it might become difficult to hold dramatists responsible. In such cases only the occupier of the premises will be there. Occupier means practically the persons who are likely to enact the play. If such people are the owners, then owners will also be liable.

This is a sort of an aid or abeting an objectionable performance and as such they are held responsible as per the provisions of this Bill. A suggestion was thrown out by Sri Muckannappa to constitute a Committee to examine the purport of the drama and the literature of the drama which is said to be objectionable. This is again going back to a suggestion which was considered by the Joint Select Committee and rejected as impracticable. Sir, the point at issue is whether the Deputy Commissioners of the districts are 'Sahitis' to decide a piece of literature which will come under the purview of objectionable performance. Well, Sir, if we look to the definitions in clause 2, these very acts come within the purview of the provisions of the Indian Penal Code. The Executive Magistrate in certain cases and the judicial magistrates in certain other cases do consider and ultimately decide these very ingredients. As such, I do not find any force in the suggestion that the Deputy Commissioners are not competent to decide this issue and that it should not entrusted solely to them. There is nothing special in this clause; it is so simple. In order to decide what is decent and what is not should we go to a literary man? As a matter of fact, any Magistrate who is empowered under the provisions of this Act can come to the conclusion taking the entire view of the provisions, Explanation I and II that certain piece of literature which is to be enacted by way of drama is objectionable.

So far as fundamental rights are concerned, these provisions are considered with scrupulous care. Rules of natural justice are observed

in case of clause 4. When a drama is temporarily prohibited, the Magistrate or the Deputy Commissioner may review on an application. That means there is an enabling clause for submitting that a particular piece is not objectionable. There will be a hearing and ultimately, it will be judged. And, if he comes to a conclusion that particular piece is objectionable, that judgment or order will sustain for two months. In the meanwhile, there is a provision for appeal to the High Court. As such, the fundamental rights are not at all affected.

Similarly clause 3. Before Governmeat pronounces a prhibitory order, Government is to hear. After having heard, Government will come to the conclusion that it is objectional if it is objectionable; otherwise it will not. In the meanwhile, if the party is agreeable to withdraw that piece, then there is no necessity of passing any prohibitory order. Those proceedings will be dropped and on his agreement the performance would be permitted to continue. So, Sir, I do not find any difficulty either in implementing it nor is there any harassment caused to those who are concerned with dramatic performances.

Mr. SPEAKER.—The question is:

"That the Mysore Dramatic Performances Bill, 1963, as reported by the Joint Select Committee, be taken into consideration."

The motion was adopted.

Mr. SPEAKER.—Clauses 2 and 3. There are no amendments. The question is:

"That clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Clause 4, there is an amendment.

Sri G. V. GOWDA.—Sir, I beg to move:

"That in sub-clause (1) lines 5 and 6 for the words 'prohibit its performance' the words 'require the organisers or other principal persons responsible for the conduct of the performance or the owner or the occupier of such public place, to show cause within a specified period, why the performance should not be prohibited' shall be substituted."

After sub-clause (1) and before the proviso, the following clauses shall be added:

"(*a*) The Deputy Commissioner may drop further proceedings—

(i) if after considering the representations made or any evidence adduced, the Deputy Commissioner is satisfied that the performance is not objectionable; or

(ii) undertake to modify the performance by omitting the utterance of words or the signs or visible representations which are objectionable.

(SRI G. V. GOWDA)

(*b*) The Deputy Commissioner may prohibit such performance —

(i) if he is satisfied that the performance is objectionable even after considering the representation made or any evidence adduced; or

(ii) if no cause is shown as aforesaid;"

" In line 2 of the proviso to sub-clause (1), after the word 'order' and before the words 'on an application' the words 'passed under clause (*b*) of sub-section (1) of section 4,' shall be added."

MR. SPEAKER.—Amendment moved :

"That in sub-clause (1) lines 5 and 6 for the words 'prohibit its performance' the words 'require the organisers or other principal persons responsible for the conduct of the performance or the owner or the occupier of such public place, to show cause within a specified period, why the performance should not be prohibited' shall be substituted.

"After sub-clause (1) and before the proviso, the following clauses shall be added:"

"(*a*) The Deputy Commissioner may drop further proceedings—

(i) if after considering the representations made or any evidence adduced, the Deputy Commissioner is satisfied hat the performance is not objectitonable; or

(ii) undertake to modify the performance by omitting the utterance of words or the signs or visible representations which are objectionable.

(*b*) The Deputy Commissioner may prohibit such performance—

(i) if he is satisfied that the performance is objectionable even after considering the representation made or any evidence adduced; or

(ii If no cause is shown as aforesaid;"

"In line 2, of the proviso to sub-clause (1), after the word 'order' and before the words 'on an application' the words 'passed under clause (*b*) of sub-section (1) of section 4,' shall be added."

4-30 P.M.

SRI G. V. GOWDA.—The pith and substance of the legislation lies, in my opinion, in clause 4. The Hon'ble Minister has been pleased to say that the prohibitory order contemplated under clause (4) is only temporary. I want to know whether the Deputy Commissioner can give a final order. No doubt there is a proviso that he may review the order passed on the application made by the party concerned. In case the party does not appear, he issues the prohibitory order temporarily. It would be operative for two months. The party can in that case appeal. Again, he will renew the temporary prohibitory order for another two months. Thus it becomes endless. I do not know when it would be final.

I do not think any question of breach of peace would arise under this law. If certain performances are likely to lead to breach of peace, other remedies are available and the Magistrate and the Police are empowered to take action under other statutes. The question of breach of peace would not arise. As the Speaker is aware under the I.P.C, only in exceptional circumstances, like waging war against the State, even a preparation will not become an offence. Attempts to commit an offence may be punishable but not preparations for the offence. If in a certain drama there is an incitement to commit murder, the cause of action would arise only when the incitement takes place. Even after the preparations, there is an opportunity for the authorities to take action and prevent it. In my opinion the Deputy Commissioner should issue a notice and if sufficient cause is shown, let him drop the proceedings. If he is not satisfied with the cause shown, let him prohibit the play permanently. The aggrieved party may then go on appeal. With that object in view I have moved the amendment, which is already contained in clause 3.

† Sri R. M. PATIL.—Sir, with great humility, I would ask my friend to kindly read clause 5. Under this clause there should be an order of prohibition which should be served on the persons concerned. In addition to the provision of making an application, there is also an order to be served upon him and thus there is a double remedy. If he does not come out with his grievences, necessarily law presumes that he accepts the order. Then there is the provision that the Deputy Commissioner may review his order on an application. Then imperatively he must serve the prohibitory order. So both the positive and negative sides are attended to. Thus the rules of natural justice have been observed. I would therefore request the Hon'ble Member to withdraw the amendment.

Mr. SPEAKER.—The question is:

"That in sub-clause (1) lines 5 and 6 for the words 'prohibit its performance' the words 'require the organisers or other principal persons responsible for the conduct of the performance or the owner or the occupier of such public place, to show cause within a specified period why the performance should not be prohibited' shall be substituted.

"After sub-clause (1) and before the proviso, the following clause shall be added:

"(*a*) The Deputy Commissioner may drop further proceedings—

(i) if after considering the representations made or any evidence adduced, the Deputy Commissioner is satisfied that the performance is not objectionable; or

(ii) undertake to modify the performance by omitting the utterance of words or the signs or visible representations which are objectionable.

(MR. SPEAKER)

(*b*) The Deputy Commissioner may prohibit such performance—

(i) if he is satisfied that the performance is objectionable even after considering the representation made or any evidence adduced; or

(ii) if no cause is shown as aforesaid;"

In line 2, of the proviso to sub-clause (1), after the word 'order' and before the words 'on an application' the words 'passed under clause (*b*) of sub-section (1) of section 4,' shall be added."

The amendment was negatived.

Mr. SPEAKER.—The question is:

"That clause 4 stand part of the Bill."

The motion was adopted.

CLAUSES 5 TO 15

Mr. SPEAKER.—The question is:

"That clauses 5 to 15, both inclusive, stand part of the Bill."

The motion was adopted.

Clauses 5 to 15, both inclusive, were added to the Bill.

CLAUSE 1, TITLE AND PREAMBLE

Mr. SPEAKER.—The question is:

"That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

The motion to pass:

Sri R. M. PATIL.—I beg to move:

"That the Mysore Dramatic Performances Bill, 1963, as reported by the Joint Select Committee, be passed."

Mr. SPEAKER.—The question is:

"That the Mysore Dramatic Performances Bill, 1963, as reported by the Joint Select Committee, be passed."

The motion was adopted.